ಆರೋಗ್ಯ ಸಚಿವರಾಗಿದ್ದರು, ಆ ಅನುಭವದಿಂದ ಹೇಳಿದರು. 3. Compulsory service ಬಗ್ಗೆ ಹೇಳಿದರು. ನಾನು ಒಂದೊಂದಕ್ಕೆ ಉತ್ತರ ಹೇಳುವಾಗ ಎಲ್ಲಾ ಸಮಸ್ಯೆಗಳು ಇತ್ಯರ್ಥವಾಗುತ್ತದೆ. ನಮ್ಮ ಇಡೀ ಸೇವೆಯಲ್ಲಿ ಈಗ 709 ವೈದ್ಯರುಗಳ ಹುದ್ದೆ ಖಾಲಿ ಇರುವುದು ನಿಜ. ಆಸ್ಪತ್ರೆಯಲ್ಲಿ ಇರಬೇಕಾದ ವೈದ್ಯರ ಹುದ್ದೆಯಲ್ಲಿ ಖಾಲಿ ಇರುವುದು 514. ಆಸ್ಪತ್ರೆಯನ್ನು ಹೊರತುಪಡಿಸಿ ನಮಗೆ ವೈದ್ಯಾಧಿಕಾರಿಗಳ ಸೇವೆ ಬೇಕು. Malaria, filarial, Ent Doctors ಬೇರೆ ಬೇರೆ ರೀತಿಯ ಹುದ್ದೆಗಳು ಇರುತ್ತದೆ. ಅವೆಲ್ಲವನ್ನು ಕೂಡಿಸಿದಾಗ 709 ಹುದ್ದೆಗಳು ಖಾಲಿ ಇದೆ. ನಾನು ಇವತ್ತು ಪ್ರಾರಂಭದಲ್ಲಿ ಒಂದು ಉತ್ತರ ಕೊಟ್ಟೆ, ನಾವು 500 ವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಮಾಡುವ ಪ್ರಕ್ರಿಯೆ ಜಾರಿ ಮಾಡಿದ್ದು ಆ ಪೈಕಿ ಈಗಾಗಲೇ 250 ವೈದ್ಯರ ನೇಮಕಾತಿಯಾಗಿದೆ. ಅವರು ಅಲ್ಲಲ್ಲಿ ಹೋಗಿ ಸೇರಿಕೊಂಡರೆ ಅಷ್ಟರ ಮಟ್ಟಿಗೆ ಕಡಿಮೆಯಾಗುತ್ತದೆ. ಉಳಿದ 250 ಹುದ್ದೆಗಳಿಗೂ ನಾವು ಬೇಕಾದ ವ್ಯವಸ್ಥೆಯನ್ನು ಮಾಡಿದ್ದೇವೆ. ಅನಂತರವೂ ಉಳಿಯುವಂಥದನ್ನು ಆಯಾಯ ಜಿಲ್ಲಾಧಿಕಾರಿಗಳ ಹತ್ತಿರ ನೇಮಕಾತಿಗೆ ಹೇಳುತ್ತೇವೆ. ಆಗ ಈ ಸಮಸ್ಯೆ ಪರಿಹಾರವಾಗುತ್ತದೆ. Mis-match ಬಗ್ಗೆ ಡಾ॥ ಮಹದೇವಪ್ಪನವರು ಹೇಳಿದಂಥದ್ದು, ಇ.ಎನ್.ಟಿ. ಯವರು ಇರಬೇಕಾದಲ್ಲಿ ಅವರು ಇಲ್ಲದೆ ಸಾಮಾನ್ಯ ಎಂ.ಬಿ.ಬಿ.ಎಸ್. ಆದವನೇ ಇರಬಹುದು. ಈ ರೀತಿ ಇರುವುದಕ್ಕಾಗಿಯೇ ತಜ್ಞ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಹೆಚ್ಚಿನ ವೇತನ ಕೊಟ್ಟು ತೆಗೆದುಕೊಳ್ಳುತ್ತಿದ್ದೇವೆ. ರಾಯರೆಡ್ಡಿಯವರು ಹೇಳಿದಂಥ 3ನೇ ಪ್ರಶ್ನೆ, ನಾನು ಈಗಾಗಲೇ ಈ ಸದನದಲ್ಲಿ ಹೇಳಿದ್ದೇನೆ. ಎಂ.ಬಿ.ಬಿ.ಎಸ್. ಕಲಯುವವರು ಸರ್ಕಾರದ ಸೀಟುಗಳನ್ನು ಪಡೆದು ಸರ್ಕಾರಿ ಕಾಲೇಜುಗಳಲ್ಲಿ ಅಥವಾ ಸರ್ಕಾರಿ ಸೀಟನ್ನು ಪಡೆದು ಖಾಸಗಿ ಕಾಲೇಜುಗಳಲ್ಲಿ ಯಾರು ಫಲಾನುಭವಿ ವೈದ್ಯರುಗಳಿರುತ್ತಾರೆ ಅಂಥವರು ಎಂ.ಬಿ.ಬಿ.ಎಸ್. ಮಟ್ಟದಲ್ಲಿ ಮತ್ತು Post-graduate levelನಲ್ಲಿ ಅವರಿಬ್ಬರು ಕಡ್ಡಾಯವಾಗಿ ಎರಡು ಮತ್ತು ಒಂದು ವರ್ಷ ಸೇವೆ ಮಾಡುವ ಬಗ್ಗೆ ಈಗಾಗಲೇ ಚೈನ್ನೈನಿಂದ ಮಾಹಿತಿ ತರಿಸಿದ್ದೇವೆ. ಇನ್ನೂ ಒಂದೆರಡು ರಾಜ್ಯಗಳಿಂದ ಮಾಹಿತಿ ತರಿಸಿ ಸರಿಯಾದ ನಿಯಮಾವಳಿಯನ್ನು ರಚಿಸಿ ಅದನ್ನು ಈ ವರ್ಷದ ಬ್ಯಾಚ್‌ಗೇ ಮಾಡಬೇಕು ಎಂದು ನಮ್ಮ ಆಸೆ ಇದೆ.

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆ

204 (1271) ಡಾ॥ ಮಹದೇವಪ್ಪ ಹೆಚ್.ಸಿ. :– ಮಾನ್ಯ ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದ ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಾಲಿ ಖಾಲಿ ಇರುವ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆಗಳೆಷ್ಟು;

ಆ) ಈ ಹುದ್ದೆಗಳು ಖಾಲಿ ಇರುವುದರಿಂದ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗಿರುವುದಿಲ್ಲವೆ ;

ಇ) ಇದರಿಂದಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಾಂಗದವರ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ತೊಂದರೆಯಾಗುವುದಿಲ್ಲವೇ ;

ಈ) ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳ ಬಗ್ಗೆ ಜಿಲ್ಲಾವಾರು ಮಾಹಿತಿ ನೀಡುವುದು;

ಉ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಬಾಲಚಂದ್ರ ಜಾರಕಿಹೊಳಿ (ಮಾನ್ಯ ಸಮಾಜ ಕಲ್ಯಾಣ ಸಚಿವರು):–

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ 3 ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಹಾಗೂ 19 ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆಗಳು ಖಾಲಿ ಇರುತ್ತವೆ.

ಆ) ಈ ಹುದ್ದೆಗಳು ಖಾಲಿ ಇರುವುದರಿಂದ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆ ಆಗುವುದನ್ನು ತಡೆಯಲು ಸದರಿ ಹುದ್ದೆಗಳು ಭರ್ತಿಯಾಗುವವರೆಗೆ ಪರ್ಯಾಯವಾಗಿ ಜಿಲ್ಲಾ ಪಂಚಾಯತ್ ಹಂತದಿಮದ ನಿಯೋಜನೆ ಮೇಲೆ ಅಧಿಕಾರಿಗಳನ್ನು ನಿಯೋಜಿಸುವುದರೊಂದಿಗೆ ಹಾಗೂ ಹೆಚ್ಚುವರಿ ಪ್ರಭಾರದಲ್ಲಿರಿಸುವ ಮುಖೇನ ಖಾಲಿ ಇರುವ ಹುದ್ದೆಗಳ ಕರ್ತವ್ಯವನ್ನು ಸಹ ನಿರ್ವಹಿಸಲಾಗುತ್ತಿದೆ.

ಇ) ಖಾಲಿ ಇರುವ ಹುದ್ದೆಗಳ ಕಾರಣ ತೊಂದರೆಯಾಗದಂತೆ ಆಯಾ ಜಿಲ್ಲಾ ಪಂಚಾಯತ್ ಹಂತದಲ್ಲೇ ಅಧಿಕ ಪ್ರಭಾರ ವ್ಯವಸ್ಥೆ ಮುಖೇನ ಹಾಗೂ ನಿಯೋಜನೆ ಮಾಡುವುದರೊಂದಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಕಾರ್ಯಕ್ರಮ ಅನುಷ್ಠಾನಕ್ಕೆ ಅಡಚಣೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ಅನುಬಂಧ–ಎ ರಲ್ಲಿ ನೀಡಲಾಗಿದೆ.

ಉ) ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ವಿಷಯ ಪರಿಶೀಲನೆಯಲ್ಲಿದೆ.

ಅನುಬಂಧ-೨೮

ಸದಸ್ಯರು ಮಾಡಿರುವ ಪ್ರಶ್ನೆಗಳ ಸಂಖ್ಯೆ ಮತ್ತು ಅವುಗಳಿಗೆ ಮಾನ್ಯ ಮಂತ್ರಿಗಳು ನೀಡಿರುವ ಉತ್ತರಗಳ ವಿವರ

ಕ್ರ. ಸಂ.	ಜಿಲ್ಲೆ	ಸದಸ್ಯರು ಮಾಡಿರುವ ಪ್ರಶ್ನೆಗಳ ಸಂಖ್ಯೆ										ಮಾನ್ಯ ಮಂತ್ರಿಗಳು ನೀಡಿರುವ ಉತ್ತರಗಳ ವಿವರ										
		ಎ ಪ್ರಶ್ನೆ ಮಾತ್ರ	ಬಿ ಪ್ರಶ್ನೆ ಮಾತ್ರ	ಒಟ್ಟು	ಪ್ರಶ್ನೆಗಳ	ಸಭಾತ್ಯಾಗ	ಪ್ರಶ್ನೆಗಳ	ಸಭಾತ್ಯಾಗ	ಪ್ರಶ್ನೆಗಳ	ಸಭಾತ್ಯಾಗ	ಪ್ರಶ್ನೆಗಳ	ಸಭಾತ್ಯಾಗ	ಪ್ರಶ್ನೆಗಳ	ಸಭಾತ್ಯಾಗ	ಪ್ರಶ್ನೆಗಳ	ಸಭಾತ್ಯಾಗ	ಪ್ರಶ್ನೆಗಳ	ಸಭಾತ್ಯಾಗ	ಪ್ರಶ್ನೆಗಳ	ಸಭಾತ್ಯಾಗ	ಒಟ್ಟು
1	ಕೋಲಾರ ಜಿಲ್ಲೆ	0	0	0	5	16	7	0	1	3	0	0	0	0	0	0	0	0	0	0	0	2
2	ಬೆಂಗಳೂರು ನಗರ	0	0	1	1	2	0	1	0	0	0	1	0	0	0	4	1	4	0	8	1	2
3	ಬೆಂಗಳೂರು (ಗ್ರಾ)	0	1	1	3	6	1	0	1	0	0	23	0	0	6	1	1	7	19	9	1	9
4	ಚಿತ್ರದುರ್ಗ	1	0	1	5	1	0	0	1	0	1	19	0	1	6	1	0	1	22	16	7	1
5	ದಾವಣಗೆರೆ	0	0	0	2	2	0	0	1	0	0	17	0	7	1	1	0	4	71	17	7	4
6	ಧಾರವಾಡ	1	0	1	3	2	1	0	0	0	1	71	0	5	1	1	0	4	196	99	33	1
7	ಕಾರವಾರ	0	1	1	7	5	1	0	0	0	0	26	0	6	1	1	0	4	77	38	15	1
8	ಹಾವೇರಿ	0	0	0	4	5	1	0	0	0	0	14	0	5	1	1	0	2	24	19	9	1
9	ಕೊಡಗು	0	0	0	4	3	2	0	0	0	0	23	0	3	2	1	0	5	36	15	9	0
10	ಚಿಕ್ಕಮಗಳೂರು	0	0	0	4	3	0	0	2	1	0	14	0	0	1	1	0	3	60	42	9	7
11	ಮಂಡ್ಯ	1	0	1	5	1	0	0	0	0	0	14	0	2	2	2	0	3	34	17	11	3
12	ಮೈಸೂರು	0	0	0	7	7	1	0	1	0	0	34	0	15	2	4	0	4	43	7	10	1
13	ಚಾಮರಾಜನಗರ	0	0	0	4	4	0	0	1	1	0	28	0	7	1	0	0	0	54	28	19	1
14	ರಾಯಚೂರು	0	0	0	1	4	0	1	0	0	0	6	0	1	0	0	0	0	7	0	3	0
15	ಬಳ್ಳಾರಿ	0	0	0	2	2	0	0	1	1	0	8	0	0	0	1	0	1	18	2	4	1
16	ಬೀದರ	0	0	0	1	3	1	0	1	1	0	4	0	0	0	0	0	0	1	1	3	2
17	ಬೆಳಗಾವಿ	0	0	0	6	4	3	0	0	1	0	9	0	1	0	1	0	0	51	10	12	3
18	ವಿಜಾಪುರ	0	1	1	4	6	0	0	0	1	0	16	0	23	0	0	0	0	123	44	14	9
19	ಬಾಗಲಕೋಟೆ	0	1	1	6	1	0	0	0	0	0	5	0	1	0	0	0	0	38	24	5	0
20	ಗದಗ	0	1	1	3	0	0	0	1	1	0	4	0	1	0	0	0	0	17	5	1	0
21	ಹಾವೇರಿ	0	1	1	3	3	0	0	0	0	0	5	0	1	0	1	0	0	36	11	10	1
22	ಉತ್ತರ ಕನ್ನಡ	0	1	1	6	3	1	0	0	0	0	7	0	11	0	3	0	0	69	19	10	4
23	ಉಡುಪಿ ಜಿಲ್ಲೆ	0	2	2	3	4	1	0	0	0	0	4	0	0	0	3	0	0	5	6	8	1
24	ಹಾಸನ	0	4	4	6	4	0	0	2	0	0	25	0	25	0	0	0	0	79	33	13	0
25	ಚಾಮರಾಜನಗರ	0	0	0	6	3	0	0	3	0	0	11	0	31	1	0	0	0	89	33	14	3
26	ಕೊಡಗು	0	1	1	4	3	0	0	4	1	0	7	0	3	1	1	0	1	32	10	6	0
27	ಬೆಂಗಳೂರು	0	1	1	8	3	1	0	2	0	1	19	0	2	2	1	0	1	78	25	12	5
28	ಮೈಸೂರು	0	1	1	4	3	1	0	1	0	0	13	0	16	4	0	0	0	33	16	5	2
	ಒಟ್ಟು	3	19	22	123	93	28	3	33	13	3	438	0	181	32	37	1	67	1264	539	253	79

ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆಗಳ ವಿವರ

ಕ್ರ. ಸಂ	ತಾಲ್ಲೂಕಿನ ಹೆಸರು	ಜಿಲ್ಲೆಗಳ ಹೆಸರು
1	ಮಾಗಡಿ	ಬೆಂಗಳೂರು (ಗ್ರಾ.) ಜಿಲ್ಲೆ
2	ರಾಮದುರ್ಗ	ಬೆಳಗಾಂ
3	ರಾಯಭಾಗ	ಬೆಳಗಾಂ
4	ಚಿಕ್ಕೋಡಿ	ಬೆಳಗಾಂ
5	ಯಾದಗಿರಿ	ಗುಲ್ಬರ್ಗಾ
6	ಸುರಪುರ	ಗುಲ್ಬರ್ಗಾ
7	ಚಿಂಚೋಳಿ	ಗುಲ್ಬರ್ಗಾ
8	ಗುಲ್ಬರ್ಗಾ	ಗುಲ್ಬರ್ಗಾ
9	ಶೇವಗಿ	ಗುಲ್ಬರ್ಗಾ
10	ಕಲಘಟಗಿ	ಧಾರವಾಡ
11	ಗಂಗಾವತಿ	ಕೊಪ್ಪಳ
12	ಹಿರೇಕೆರೂರು	ಹಾವೇರಿ
13	ನರಗುಂದ	ಗದಗ
14	ಬಳ್ಳಾರಿ	ಬಳ್ಳಾರಿ
15	ಬಸವಕಲ್ಯಾಣ	ಬೀದರ್
16	ಜೋಯಿಡಾ	ಉತ್ತರ ಕನ್ನಡ
17	ಮುಂಡಗೋಡ	ಉತ್ತರ ಕನ್ನಡ
18	ಮುಧೋಳ	ಬಾಗಲಕೋಟೆ
19	ತಿಪಟೂರು	ತುಮಕೂರು

ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಹುದ್ದೆಗಳ ವಿವರ

ಕ್ರ. ಸಂ.	ಜಿಲ್ಲೆಗಳ	ಹುದ್ದೆ ಖಾಲಿ ಇದೆಯೇ/ ಇಲ್ಲವೇ
1	ಚಿತ್ರದುರ್ಗ	ಹುದ್ದೆ ಖಾಲಿ ಇದೆ
2	ಕೋಲಾರ	ಹುದ್ದೆ ಖಾಲಿ ಇದೆ
3	ಮಂಡ್ಯ	ಹುದ್ದೆ ಖಾಲಿ ಇದೆ

ಡಾ॥ ಹೆಚ್.ಸಿ. ಮಹದೇವಪ್ಪ.– ಉತ್ತರ ಕೊಟ್ಟಿದ್ದಾರೆ. ಉತ್ತರದಲ್ಲಿ ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ Residential School, Morarji Residential Schools, Hostels ಗಳಲ್ಲಿ ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳಲ್ಲಿ ಒಟ್ಟು 3281 ಹುದ್ದೆಗಳು ಖಾಲಿ ಇದೆ. ಸರ್ಕಾರದಲ್ಲಿ ಸಾಮಾನ್ಯವಾಗಿ ಕೆಲವು ಇಲಾಖೆಗಳ ಬಗ್ಗೆ ಮಲತಾಯಿ ಧೋರಣೆಯಿಂದ ಕಾಣುತ್ತಾರೆ. ಅದರಲ್ಲಿ ಮುಖ್ಯವಾಗಿ ಇರುವುದು ಸಮಾಜ ಕಲ್ಯಾಣ ಇಲಾಖೆ. ಮಂತ್ರಿಯವರಿಗೆ ಕೆಲಸ ಮಾಡುವ ಉತ್ಸಾಹ ಇದೆ. ಅವರಿಗೆ ಒಳ್ಳೆಯ commitment ಇರತಕ್ಕ ಕಾರ್ಯದರ್ಶಿ ಮತ್ತು ಕಮಿಷನರ್ ಇದ್ದಾರೆ. ಇಷ್ಟೊಂದು ಸಿಬ್ಬಂದಿಯ ಕೊರತೆ ಇದ್ದರೆ, ವಾರ್ಡನ್ಸ್, ಕುಕ್, assistant cook, teachers ಇಲ್ಲ. ಇವರು ಯಾರೂ ಇಲ್ಲದೆಯೇ ಹೇಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಕಾರ್ಯಕ್ರಮವನ್ನು ಜಾರಿಗೆ ತರುತ್ತೀರಿ? ಅಲ್ಲಿ ಮೊದಲೇ diversion, lapse, deviation, returning the fund ಈ ರೀತಿ ಮಾಡಿ anti-Dalit stand ಇರತಕ್ಕ ಒಂದು ಇಲಾಖೆ ಇದು. ಇದನ್ನು ಸುಧಾರಣೆ ಮಾಡಲು ಸಿಬ್ಬಂದಿಯನ್ನು ಕೊಡದಿದ್ದರೆ ಕೆಲಸ ಮಾಡುವುದು ಹೇಗೆ ? ಎಷ್ಟೇ ಕಾಳಜಿ ಅಧಿಕಾರಿಗಳಿಗೆ, ಮಂತ್ರಿಗಳಿಗೆ ಇದ್ದರೂ ಕೆಲಸ ಮಾಡುವುದು ಹೇಗೆ ? ಕಳೆದ ಹಲವು ವರ್ಷದಲ್ಲಿ ಸುಮಾರು 8–10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಆಗದೆಯೇ ಹಣಕಾಸು ಇಲಾಖೆಗೆ ವಾಪಸ್ ಕೊಟ್ಟಿದ್ದಾರೆ. ಈ ರೀತಿ ಸಿಬ್ಬಂದಿ ಕೊರತೆಯನ್ನು ಇಟ್ಟುಕೊಂಡು ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಸ್.ಸಿ., ಎಸ್.ಟಿ. ಜನಾಂಗದವರ ಅಭಿವೃದ್ಧಿಯನ್ನು , ಮಕ್ಕಳ ಶಿಕ್ಷಣವನ್ನು ಯಾವ ರೀತಿಯಾಗಿ ಕೊಡಲು ಸಾಧ್ಯವಾಗುತ್ತದೆ ?

ಶ್ರೀ ಕೆ. ಅನ್ನದಾನಿ.– ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು .– ಮೊದಲು ಮಾನ್ಯ ಸಚಿವರು ಅವರಿಗೆ ಉತ್ತರ ಹೇಳಲಿ. ಅವರಿಗೆ ಉತ್ತರ ಹೇಳುವುದಕ್ಕಿಂತ ಮುಂಚೆಯೇ ನೀವು ಪ್ರಶ್ನೆ ಕೇಳಿದರೆ ಹೇಗೆ ? ಮೊದಲು ಅವರು ಉತ್ತರ ಹೇಳಲಿ, ನಂತರ ನಿಮ್ಮ supplementary ಪ್ರಶ್ನೆ ಏನಾದರೂ ಇದ್ದರೆ ಕೇಳುವಿರಂತೆ.

ಶ್ರೀ ಬಾಲಚಂದ್ರ ಜಾರಕಿಹೊಳಿ.– ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಡಾ॥ ಮಹೇವಪ್ಪನವರು ಸಮಾಜ ಕಲ್ಯಾಣ ಇಲಾಖೆಯಲ್ಲಿ 3000 ಹುದ್ದೆಗಳು ಖಾಲಿ ಇದೆ ಎಂದರು. ಈಗಾಗಲೇ ನಾವು ಮೊರಾರ್ಜಿ ದೇಸಾಯಿ ವಸತಿ ಶಾಲೆ ಶಿಕ್ಷಕರ ನೇಮಕಾತಿಗೆ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೊಂದಿಗೆ ಈ ಬಗ್ಗೆ ಸಭೆಯೊಂದನ್ನು ನಡೆಸಿದ್ದೇವೆ. ನಾವು ಅತಿ

ಶೀಘ್ರದಲ್ಲೇ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುತ್ತೇವೆ. ಅದರ ಜೊತೆಗೆ ಅತಿ ಮುಖ್ಯವಾಗಿರುವ ಅಡಿಗೆ ಸಹಾಯಕರ 896 ಹುದ್ದೆಗಳು ಖಾಲಿ ಇವೆ. ಅದೂ ಕೂಡ ಬಹಳ ಮುಖ್ಯವಾದಂತಹ ಹುದ್ದೆಯಾಗಿರುವುದಿರಂದ, ಅದನ್ನೂ ತುಂಬಲು ಸಹ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ಮಾಡಿ ಅದರ ಬಗ್ಗೆ ಅತಿ ಶೀಘ್ರದಲ್ಲೇ ನಿರ್ಧಾರವನ್ನು ತೆಗೆದುಕೊಂಡು ಹಣಕಾಸಿನ ಇಲಾಖೆ ಒಪ್ಪಿಗೆ ಪಡೆದು, ಸದ್ಯದಲ್ಲೆ ಶಿಕ್ಷಕರು ಮತ್ತು ಅಡಿಗೆ ಸಹಾಯಕರ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಿಕೊಳ್ಳುತ್ತೇವೆ. ಇದರ ಜೊತೆಗೆ ಹಂತ ಹಂತವಾಗಿ wardens ಇರಬಹುದು, watchmen ಇರಬಹುದು, ಅವರನ್ನೂ ಅತಿ ಶೀಘ್ರದಲ್ಲೇ ನಮ್ಮ ಇಲಾಖೆಯಿಂದ ಭರ್ತಿ ಮಾಡುತ್ತೇವೆ. ಈಗಾಗಲೇ ಕೆಲವು ಕಡೆ ಖಾಲಿ ಇರುವಲ್ಲಿ ಬೇರೆ ಬೇರೆ ಇಲಾಖೆಗಳಿಂದ ನಿಯೋಜನೆ ಮೇಲೆ ಸಿಬ್ಬಂದಿಯನ್ನು ಪಡೆದುಕೊಂಡು ನಾವು ನಮ್ಮ ಇಲಾಖೆಯನ್ನು ನಡೆಸುತ್ತಿದ್ದೇವೆ. ಎನೂ ತೊಂದರೆ ಇಲ್ಲ. ಆದರೂ ಅತಿ ಶೀಘ್ರದಲ್ಲೇ ಈ post ಗಳನ್ನು ತುಂಬುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಡಾ॥ ಕೆ. ಅನ್ನದಾನಿ.– ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ತೀರಾ ಬಡತನದಲ್ಲಿ ಇರತಕ್ಕಂಥ ಜನರಿಗೆ ಧ್ವನಿ ಕೊಡತಕ್ಕಂಥ ಒಂದು ಇಲಾಖೆಯಾಗಿದೆ. ಇದು ಬಡವರ ಪರವಾಗಿ ಬಹಳ ಕೆಲಸ ಮಾಡಬೇಕಾಗಿರತಕ್ಕಂಥ ಇಲಾಖೆಯಾಗಿದೆ. ಮಾನ್ಯ ಬಾಲಚಂದ್ರ ಜಾರಕಿಹೊಳಿಯವರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಮಗೆ ಅವರ ಬಗ್ಗೆ ಗೌರವವಿದೆ. ಅವರು ಹೊಸದಾಗಿ ಮೊರಾರ್ಜಿ ದೇಸಾಯಿ ಶಾಲೆಗಳನ್ನು ಕೊಟ್ಟಿದ್ದಾರೆ, ಬಿಸಿಎಂ ಹಾಸ್ಟಲ್‌ಗಳನ್ನು ಕೊಟ್ಟಿದ್ದಾರೆ, SC/ST hostelಗಳನ್ನು ಕೊಟ್ಟಿದ್ದಾರೆ. ಅವರು ಚೆನ್ನಾಗಿ ತಮ್ಮ ಕಾರ್ಯನಿರ್ವಹಣೆಯನ್ನು ಮಾಡುತ್ತಿದ್ದಾರೆ, ಸಂತೋಷ. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಬಹಳಷ್ಟು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಚ್ಚುಕಟ್ಟಾಗಿ ಬಹಳ ಚೆನ್ನಾಗಿ ನಿರ್ಮಾಣ ಮಾಡಿದ್ದೀರಿ, ಸಂತೋಷ. ಆದರೆ ಈ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳತಕ್ಕಂಥ ಸಂದರ್ಭದಲ್ಲಿ ನೀವು ಯಾವ ತರಹ ನೇಮಕ ಮಾಡಿಕೊಂಡಿದ್ದೀರಾ ? ಇದರಿಂದ ಉಪನ್ಯಾಸಕರುಗಳಿಗೆ ಆಗುತ್ತಿರುವ ಅನ್ಯಾಯವೇನು ? ಇದುವರೆಗೂ ಅವರನ್ನು ಗೌರವಧನದ ಆಧಾರದ ಮೆಲೆ ಅಥವಾ ಒಂದು ವರ್ಷಕ್ಕೆ temporary ಆಗಿ ನೇಮಕ ಮಾಡಿಕೊಳ್ಳುತ್ತಿದ್ದೀರಿ. ಏಪ್ರಿಲ್‌ನಲ್ಲಿ ಅವರನ್ನು ತೆಗೆದುಕೊಂಡು ಮತ್ತೊಂದು ಏಪ್ರಿಲ್‌ಗೆ ಅವರನ್ನು ಕೆಲಸದಿಂದ ತೆಗೆದು ಹಾಕುವುದು, ಪುನಃ ಅವರನ್ನೇ ನೇಮಕ ಮಾಡುವುದು ನಡೆಯುತ್ತಿದೆ. ಈ ತರಹ ಶಿಕ್ಷಕರನ್ನು ನೇಮಕ ಮಾಡಿದರೆ,

ಉನ್ನತವಾದ ಶಿಕ್ಷಣವನ್ನು ಕೊಡಲಿಕ್ಕೆ ಹೇಗೆ ಸಾಧ್ಯವಾಗುತ್ತದೆ ? ದಯಮಾಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆತಲ್ಲಿ ಇರತಕ್ಕಂಥ ಶಿಕ್ಷಕರನ್ನು ನೀವು ನೇಮಕ ಮಾಡುವುದರಲ್ಲಿ ಸರಿಯಾದ ರೀತಿಯಲ್ಲಿ ನಿರ್ವಹಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ.– ಮಾನ್ಯ ಅಧ್ಯಕ್ಷರೆ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಏನಿವೆಯೋ, ಅವುಗಳು ಕೇಂದ್ರ ಸರ್ಕಾರದ ನವೋದಯ ವಸತಿ ಶಾಲೆಗಳ ಮಾದರಿಯಲ್ಲಿ ನಡಯಬೇಕು. ಇವತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಜಿಲ್ಲಾ ಪಂಚಾಯತ್‌ಗೆ ವರ್ಗಾಯಿಸಿದ್ದಾರೆ. ಅಲ್ಲಿನ ಶಿಕ್ಷಕರನ್ನು ನೇಮಕ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾ ಪಂಚಾಯತ್‌ಗಳಿಗೆ ಕೊಟ್ಟಿದ್ದಾರೆ. ಜಿಲ್ಲಾ ಪಂಚಾಯತ್‌ನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರತಕ್ಕಂಥ ನೂರಾರು ಹಾಸ್ಟೆಲ್‌ಗಳನ್ನು ನೋಡಿಕೊಳ್ಳುವುದರ ಜೊತೆಗೆ, ಈ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಲಿಕ್ಕೆ ಆಗುತ್ತಿಲ್ಲ. ರಾಜ್ಯ ಮಟ್ಟದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ದೇಶಕರಿದ್ದಾರೆ. ಯಾವ ರೀತಿಯಲ್ಲಿ ರಾಜ್ಯ ಮಟ್ಟದಲ್ಲಿ ನವೋದಯ ಶಾಲೆಗಳು ಕೇಂದ್ರ ಸರ್ಕಾರದಿಂದ direct ಆಗಿ ನಡೆಯುತ್ತವೋ, ಅದೇ ರೀತಿಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ Directorate ಏನಿದೆ, ಅದರ ಮುಖಾಂತರ ನಡೆಯಬೇಕು. ಮಾನ್ಯ ಅನ್ನದಾನಿಯವರು ಹೇಳಿದಂತೆ, ಬಹಳಷ್ಟು ವರ್ಷಗಳಿಂದ ಸುಮಾರು ಜನ ಅಲ್ಲಿ teachers ಆಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿಯ ಉಪನ್ಯಾಸಕರನ್ನು ಸರ್ಕಾರದವರು ಇನ್ನೂ permanent ಮಾಡಿಲ್ಲ. ಆದ್ದರಿಂದ ಅವರನ್ನು permanent ಮಾಡಬೇಕು ಮತ್ತು ಉತ್ತಮವಾದಂತಹ ಸಂಬಳವನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸಚಿವರನ್ನು ಕೋರುತ್ತಿದ್ದೇನೆ.

ಡಾ॥ ಹೆಚ್.ಸಿ. ಮಹದೇವಪ್ಪ.– ಮಾನ್ಯ ಅಧ್ಯಕ್ಷರೆ, 800 ಅಡಿಗೆ ಸಹಾಯಕರು ಖಾಲಿ ಇದ್ದಾರೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ ಅವರು ಕೊಟ್ಟಿರುವ figuresನಲ್ಲಿ 1354 ಹುದ್ದೆ ಖಾಲಿ ಇದೆ ಎಂದು ಮಾಹಿತಿ ಇದೆ. ಒಟ್ಟು 3000 ಖಾಲಿ ಹುದ್ದೆಗಳಲ್ಲಿ ಅಡಿಗೆಯವರು ಮತ್ತು ಸಹಾಯಕ ಅಡಿಗೆಯವರ ಹುದ್ದೆಗಳೂ ಸಹ ಸೇರಿವೆ. Residential Schools ಪ್ರತಿಭಾವಂತ ಮಕ್ಕಳಿಗಾಗಿಯೇ ಸ್ಥಾಪನೆ ಮಾಡಲ್ಪಟ್ಟಿವೆ. ಅಲ್ಲಿ regular teachers appointment ಮಾಡಿ ಅಲ್ಲಿನ ಗುಣ ಮಟ್ಟವನ್ನು maintain ಮಾಡಬೇಕು. ಒಂದು ವರ್ಷ ತೆಗೆದುಕೊಳ್ಳುವುದು, ಅವರನ್ನು confirm ಮಾಡಿಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಅವರನ್ನು ಮತ್ತೆ ಕೆಲಸದಿಂದ ತೆಗೆದಯುವುದು, ಈ ರೀತಿ ಮಾಡಿದರೆ ಶಿಕ್ಷಣದ ಗುಣಮಟ್ಟ ಮಕ್ಕಳಲ್ಲಿ ಕಡಿಮೆಯಾಗುತ್ತದೆ. Finance Department ಜೊತೆಗೆ

ಇವರಿನ್ನೂ ಚರ್ಚೆ ಮಾಡುತ್ತಿದ್ದಾರೆ, ಅವರು ಇವರಿಗೆ ಖಾಲಿ ಹುದ್ದೆ ತುಂಬಲು ಇನ್ನೂ concurrence ಕೊಟ್ಟಿಲ್ಲ. ವಸತಿ ಶಾಲೆಯ ಶಿಕ್ಷಕರ ಹುದ್ದೆಗಳನ್ನು ನೀವು ಯಾವಾಗ ತುಂಬುತ್ತೀರಿ ? ಅಡಿಗೆಯವರು ಮತ್ತು ಸಹಾಯಕ ಅಡಿಗೆಯವರ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ? ಇವತ್ತು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿಯೂ ಸಹ ಇಲಾಖೆಯ ಅಧಿಕಾರಿಗಳಿಲ್ಲ. ಇಲಾಖೆಯ other programmes ಸಹ implement ಆಗಬೇಕಲ್ಲವೇ? ಆದ್ದರಿಂದ, ಇದು ಪ್ರಮುಖವಾದಂತಹ ವಿಷಯವಾಗಿದೆ. ನಿರ್ದಿಷ್ಟ ಸಮಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುತ್ತೇವೆಂದು ಮಾನ್ಯ ಸಚಿವರು ಈ ಸದನಕ್ಕೆ ಭರವಸೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ.– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಾ॥ ಅನ್ನದಾನಿಯವರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಇರತಕ್ಕಂಥ ಶಿಕ್ಷಕರ ಬಗ್ಗೆ ಕೇಳಿದರು. Karnataka Residential Education Society (KRES) ಎಂದೇನು ಸಂಸ್ಥೆಯನ್ನು ನಾವು ನಡೆಸುತ್ತಿದ್ದೇವೆ, ಅದರ ಮುಖಾಂತರ ಈಗಾಗಲೇ 600 ಜನ ಶಿಕ್ಷಕರನ್ನು ಮುಂಚೆಯೇ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿದ್ದೇವೆ. ಜಿಲ್ಲಾ ಪಂಚಾಯತ್ out source ನಿಂದ ಕೆಲವೊಂದು ಶಿಕ್ಷಕರನ್ನು ಗುತ್ತಿಗೆ ಆಧಾರದ ಮೇಲೆ ನಾವು ತೆಗೆದುಕೊಂಡಿದ್ದೇವೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಶಿಕ್ಷಣ ನೀಡುವುದು ಬಹಳ ಪ್ರಾಮುಖ್ಯವಾದುದು. ಇದನ್ನು ನಾವು ಗಮನದಲ್ಲಿಟ್ಟುಕೊಂಡು, 2000ಕ್ಕೂ ಹೆಚ್ಚು ಶಿಕ್ಷಕರನ್ನು ನೇರ ನೇಮಕಾತಿ ಮಾಡಬೇಕೆಂದು ಈಗಾಗಲೇ ಚರ್ಚೆಯಾಗಿ, ಆ ಬಗ್ಗೆ ಸಭೆಯೊಂದನ್ನೂ ಸಹ ನಡೆಸಲಾಗಿದೆ. ಅತಿ ಶೀಘ್ರದಲ್ಲಿ ಅಂದರೆ ಎರಡು ತಿಂಗಳೊಳಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭ ಮಾಡಿ ನಾವು selection ಅಂತಿಮಗೊಳಿಸುತ್ತೇವೆ. Education Department ಜೊತೆಗೆ ಸೇರಿ ನಾವು selection ಮಾಡಿಕೊಂಡು ಇನ್ನೆರಡು ತಿಂಗಳೊಳಗಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶಿಕ್ಷಕರನ್ನು ನಾವು ನೇಮಕಾಇ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರಾದ ಡಾ॥ ಮಹದೇವಪ್ಪನವರ ಪ್ರಶ್ನೆಗೆ ಉತ್ತರಿಸುವುದಾದರೆ, Cooks 896 ಮತ್ತು ಅದರ ಜೊತೆಗೆ ಅಡಿಗೆ ಸಹಾಯಕರು 367 ಹುದ್ದೆ ಖಾಲಿ ಇದೆ. ಎಲ್ಲಾ ಸೇರಿ ಇಷ್ಟೊಂದು ಹುದ್ದೆಗಳು ಖಾಲಿ ಇವೆ. ಅದರ ಬಗ್ಗೆ ಈಗಾಗಲೇ ನಾವು ಸಭೆಯನ್ನು ಮಾಡಿದ್ದೇವೆ. ಅತಿ ಶೀಘ್ರದಲ್ಲೇ ನಾವು ಹುದ್ದೆಗಳನ್ನು ತುಂಬುತ್ತೇವೆ. ಮಾನ್ಯ ಧ್ರುವನಾರಾಯಣರವರು ಜಿಲ್ಲಾ ಪಂಚಾಯಿತಿಯಿಂದ ಶಿಕ್ಷಕರ ನೇಮಕ ಮಾಡುವ ಅಧಿಕಾರ ಹಿಂದಕ್ಕೆ ಪಡೆದು ಅದನ್ನು ಕರ್ನಾಟಕ ವಸತಿ ಶಿಕ್ಷಣ ಸಂಘದ ನಿರ್ದೇಶಕರಿಗೆ ಕೊಡಬೇಕೆಂದು

ಹೇಳಿದರು. ಈಗಾಗಲೇ ಅದರ ಬಗ್ಗೆ ಯೋಚನೆ ಮಾಡಿದ್ದೇವೆ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಬಹಳಷ್ಟು ವಿಷಯಗಳನ್ನು ಜಿಲ್ಲಾ ಪಂಚಾಯಿತಿಯಿಂದ ವಾಪಸ್ ಪಡೆದು, ಜಿಲ್ಲಾಧಿಕಾರಿಗಳ ಮುಖಾಂತರ implement ಮಾಡಬೇಕೆಂದು ನನ್ನದೊಂದು ಯೋಚನೆ ಇದೆ. ಬೇರೆ ಬೇರೆ ಇಲಾಖೆಯದು ನನಗೆ ಗೊತ್ತಿಲ್ಲ. ಆದರೆ ನನ್ನ ಇಲಾಖೆಯದನ್ನು ಜಿಲ್ಲಾಧಿಕಾರಿಗಳ ಮುಖಾಂತರವೇ ಮಾಡಲಿಕ್ಕೆ ಅತಿ ಶೀಘ್ರದಲ್ಲೇ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿರುವ ಭೋದಕರ ಕೊರತೆಯ ಬಗ್ಗೆ

210 (1501) ಶ್ರೀ ಬಾಲರಾಜ್. ಎಸ್. :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಹೊಸದಾಗಿ ಸ್ಥಾಪನೆಯಾಗುತ್ತಿರುವ ಕಾಲೇಜುಗಳಲ್ಲಿ ಹಾಗೂ ಚಾಲ್ತಿಯಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಭೋದಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಭೋದಕರ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

ಇ) ಪ್ರಸಕ್ತ ಸಾಲಿನಲ್ಲಿ ಈ ಕೊರತೆಯನ್ನು ನೀಗಿಸಲಾಗುವುದೇ ;

ಈ) ಆರೋಗ್ಯ ಇಲಾಖೆಯಿಮದ ಅನುಭವಿ ತಜ್ಞ ವೈದ್ಯರನ್ನು ವೈದ್ಯಕೀಯ ಕಾಲೇಜುಗಳಲ್ಲಿ ಭೋದಕರಾಗಿ ನೇಮಕ ಮಾಡುವಂತೆ ಮನವಿಗಳೇನಾದರೂ ಸರ್ಕಾರಕ್ಕೆ ಬಂದಿದೆಯೇ ;

ಉ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

ಊ) ಹಾಗಿದ್ದಲ್ಲಿ, ಸದರಿಯವರನ್ನೇ ನೇಮಕ ಮಾಡಿಕೊಳ್ಳಲಾಗುವುದೇ ?

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) ಬೆಂಗಳೂರು ಮತ್ತು ಮೈಸೂರು ವೈದ್ಯಕೀಯ ವಿದ್ಯಾಲಯಗಳು ಸ್ವಾಯತ್ತ ಸಂಸ್ಥೆಗಳಾಗಿರುವ ಹಿನ್ನೆಲೆಯಲ್ಲಿ, ಎಂ.ಸಿ.ಐ. ನಿಯಮಾವಳಿಗಳ ಅನುಸಾರವಾಗಿ ಕೊರತೆ